ದಿನಾಂಕ 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಎ. ಕೆ.ಪಿ ವಕೀಲರವರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರರ ಪರ ಸಾಕ್ಷಿದಾರನಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಅರ್ಜಿದಾರರಿಗೆ ಸಂಬಂದಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 25 ಎಂದು, 08 ಎಕ್ಸ್ರೇ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.26 ಎಂದು ಗುರುತಿಸಲಾಯಿತು. ಅರ್ಜಿದಾರರಿಗೆ ನೀಡಿದ ಚಿಕಿತ್ಸೆಯ ಬಗೆಗ ಪ್ರಮಾಣಪತ್ರವನ್ನು ನೀಡಿರುತ್ತೇನೆ ಅದನ್ನು ಈಗಾಗಲೇ ನಿಪಿ 14 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.14(ಎ) ಎಂದು, ಅರ್ಜಿದಾರರ ಅಂಗನ್ಯೂನತಾ ಪ್ರಮಾಣ ಪತ್ರ ವನ್ನು ನೀಡಿರುತ್ತೇನೆ. ಅದನ್ನು ಈಗಾಗಲೇ ನಿಪಿ 15 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರವಾಗಿ ಶ್ರೀ ಡಿ. ಬಿ . ಎಸ್ ವಕೀಲರಿಂದಃ**

ಅರ್ಜಿದಾರರಿಗೆ ಆಗಿದ್ದ ಮೂಳೆ ಮುರಿತವು ಜೋಡಣೆಯಾಗಿದೆ ಎಂದರೆ ಹೌದು. ನಿಮ್ಮ ಸಲಹೆಯ ಮೇರೆಗೆ ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರ ಕೋರಿಕೆಯ ಮೇರೆಗೆ ಬಿಡುಗಡೆ ಮಾಡಿರುತ್ತೇವೆ. ನಿಮ್ಮ ಆಸ್ಪತ್ರೆಯ ಬಿಡುಗಡೆ ಪತ್ರದಲ್ಲಿ ಯಾವ ಚಿಕಿತ್ಸೆ ಅಗತ್ಯವಿದೆಯೆಂದು ಎಂದು ನಮೂದು ಮಾಡಿರುತ್ತೀರೋ ಆ ಚಿಕಿತ್ಸೆ ಯನ್ನು ಅರ್ಜಿದಾರರಿಗೆ ನೀಡಿರುತ್ತೀರ ಎಂದರೆ ಹೌದು.

ಯಾದಗಿರಿ ಆಸ್ಪತ್ರೆಯಲ್ಲಿ ಯಾವೆಲ್ಲ ಚಿಕಿತ್ಸೆ ಯನ್ನು ನೀಡಿರುತ್ತಾರೆ ಎಂದು ನೀವು ತಿಳಿದುಕೊಂಡಿಲ್ಲ ಎಂದರೆ ಅವರು ನೀಡಿರುವ ಚಿಕಿತ್ಸೆಗೆ ಸಂಬಂದಿಸಿದ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ನೋಡಿರುತ್ತೇನೆ. ಯಾದಗಿರಿಯ ಆಸ್ಪತ್ರೆಯಲ್ಲಿ ನೀಡಿರುವ ಚಿಕಿತ್ಸೆಗಳ ಅಗತ್ಯವಿದೆ ಎಂದು ನಿಮ್ಮ ಆಸ್ಪತ್ರೆಯ ಬಿಡುಗಡೆ ಪತ್ರದಲ್ಲಿ ಕಾಣಸಿರುತ್ತೀರಾ ಎಂದರೆ ಹೌದು. ಯಾದಗಿರಿ ಆಸ್ಪತ್ರೆಯಲ್ಲಿ ಯಾವ ರೀತಿಯ ಚಿಕಿತ್ಸೆಯನ್ನು ನೀಡಿರುತ್ತಾರೆ ಹಾಗೂ ಅರ್ಜಿದಾರರು ಅವರ ಚಿಕಿತ್ಸೆಗೆ ಹೇಗೆ ಸ್ಪಂದಿಸಿರುತ್ತಾರೆ ಎಂದು ನೀವು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಹೌದು.

ಅರ್ಜಿದಾರರನ್ನು ನೀವು ಯಾವ ದಿನದಂದು ಕೊನೆಯ ಬಾರಿ ನೋಡಿರುತ್ತೀರಿ ಎಂದರೆ ದಿಃ 12-09-2025 ರಂದು ಅಂಗನ್ಯೂನತೆಯ ಪ್ರಮಾಣ ಪತ್ರವನ್ನು ಪಡೆಯಲು ಬಂದಾಗ ನೋಡಿರುತ್ತೇನೆ. ಕೊನೆಯ ಬಾರಿ ಅರ್ಜಿದಾರರು ಅಂಗನ್ಯೂನತೆಯ ಪ್ರಮಾಣ ಪತ್ರ ವನ್ನು ಪಡೆಯಲು ನಿಮ್ಮ ಆಸ್ಪತ್ರೆ ಗೆ ಬಂದಿರುವುದು ಎಂದರೆ ಹೌದು. ಅಂಗನ್ಯೂನತೆಯ ಪ್ರಮಾಣ ಪತ್ರ ವನ್ನು ಪಡೆಯಲು ಬಂದ ವೇಳೆ ಅವರ ಎಲ್ಲಾ ಚಿಕಿತ್ಸೆ ಗಳು ಮುಗಿದಿತ್ತೇ ಎಂದರೆ ಹೌದು. ಅವರಿಗೆ ಎಷ್ಟು ಅಂಗನ್ಯೂನತೆ ಇತ್ತು ಎಂದರೆ ಅರ್ಜಿದಾರರು ಎಡಗಾಲಿಗೆ ಸಂಬಂದಿಸಿದಂತೆ ಶೇಕಡಾ 30.2 ರಷ್ಟು ಇತ್ತು.

ಅಂಗನ್ಯೂನತೆಯನ್ನು ಸಂಪೂರ್ಣ ದೇಹಕ್ಕೆ ಸಂಬಂದಿಸಿದಂತೆ ನೀಡಿರುವುದಿಲ್ಲ ಎಂದರೆ ಹೌದು. ಅರ್ಜಿದಾರರ ಉದ್ಯೋಗವನ್ನು ಆದರಿಸಿ ಅಂಗನ್ಯೂನತೆಯನ್ನು ನಿರ್ಧರಿಸಿರುವುದಿಲ್ಲ ಎಂದರೆ ಹೌದು. ನೀವು ಹೇಳಿದಂತೆ ಅರ್ಜಿದಾರರಿಗೆ ಅಂಗನ್ಯೂನತೆಯು ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಅಂಗನ್ಯೂನತೆಯ ಪ್ರಮಾಣ ಪತ್ರ ವನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ ಉಡುಪಿ.